# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-3737/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 31/01/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಜೆ.ರಾಜು, ಅಧ್ಯಕ್ಷರು, (2) ಶ್ರೀ.ಜಿ.ಬಿ.ವಿಜಯ್‌ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, (3) ಶ್ರೀ.ಕೃಷ್ಣನಾಯಕ ಕೆ, ಸಹಾಯಕ ಅಭಿಯಂತರರು ಮತ್ತು (4) ಶ್ರೀ.ಎಂ.ವಿ.ರಾಜಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನ್ಯಾಮತಿ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಕರಿಬಸಪ್ಪ ಆರ್ ಬಿನ್ ನಿಂಗಪ್ಪ ರೆಡ್ಡಿ, ಆಜಾದ್ ರಸ್ತೆ, ನ್ಯಾಮತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ (1) ಶ್ರೀ.ಜೆ.ರಾಜು, ಅಧ್ಯಕ್ಷರು, (2) ಶ್ರೀ.ಜಿ.ಬಿ.ವಿಜಯ್‌ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, (3) ಶ್ರೀ.ಕೃಷ್ಣನಾಯಕ ಕೆ, ಕಿರಿಯ ಅಭಿಯಂತರರು ಮತ್ತು (4) ಶ್ರೀ.ಎಂ.ವಿ.ರಾಜಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನ್ಯಾಮತಿ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ದೂರುದಾರರು ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ನ್ಯಾಮತಿ ಗ್ರಾಮಪಂಚಾಯಿತಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ 2013-14ನೇ ಸಾಲಿನಲ್ಲಿ ನಡೆದ ಕಾಮಗಾರಿಯಲ್ಲಿ ಹಲವಾರು ಅಕ್ರಮಗಳು ನಡೆದಿದ್ದು, ಕೂಲಿ ಕಾರ್ಮಿಕರಿಗೆ ಕೆಲಸ ಕೊಡದೆ ಕೆಲವು ಗುತ್ತಿಗೆದಾರರಿಂದ ಕೆಲಸ ನಿರ್ವಹಿಸಿರುತ್ತಾರೆ ಮತ್ತು ಯಂತ್ರಗಳನ್ನು ಉಪಯೋಗಿಸಿ ಕೆಲಸ ನಿರ್ವಹಿಸಿರುತ್ತಾರೆ. ಕೆಲಸಗಳನ್ನು ಕೂಲಿ ಕಾರ್ಮಿಕರಿಂದ ಮಾಡಿಸದಿದ್ದರೂ ಕಾರ್ಮಿಕರೇ ಕೆಲಸ ನಿರ್ವಹಿಸಿರುವುದಾಗಿ ನಕಲಿ ಎನ್.ಎಂ.ಆರ್. ಸೃಷ್ಟಿಸಿ ಎಂ.ಬಿ ಬರೆದಿರುತ್ತಾರೆ. ನಕಲಿ ಜಾಬ್ ಕಾರ್ಡ್ ಸೃಷ್ಟಿಸಿ ಅವರ ಖಾತೆಗಳಿಗೆ ಹಣ ಬಿಡುಗಡೆ ಮಾಡಿಸಿಕೊಂಡು ಹಣವನ್ನು ಬಿಡಿಸಿಕೊಳ್ಳುತ್ತಿದ್ದಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಜೋಗದ ಬಸವರಾಜಪ್ಪನ ಹೊಲದಿಂದ

ದೊಡ್ಡೆತ್ತಿನಹಳ್ಳಿ ಗಣೇಶಪ್ಪನ ಹೊಲಗಳಿಗೆ ಜಂಗಲ್ ಕಟಿಂಗ್ ಕಾಮಗಾರಿಯು ಫಾರಂ ನಂ.6 ರಲ್ಲಿ ನೀಡಿದ ಕೂಲಿಕಾರರ ಅರ್ಜಿಯನ್ವಯ ಪಂಚಾಯತ್ ಇಂಜಿನಿಯರಿಂಗ ವಿಭಾಗದ ಕಿರಿಯ ಇಂಜಿನಿಯರ್ ಹತ್ತಿರ ಅಂದಾಜು ಪಟ್ಟಿ ತಯಾರಿಸಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಆಡಳಿತಾತ್ಮಕ ಮಂಜೂರಾತಿ ನೀಡಿ 6/2013-14 ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ತಾಂತ್ರಿಕ ಮಂಜೂರಾತಿ ಪಡೆದು ನಂತರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಕಾಮಗಾರಿ ಸಂ.7/13-14 ರಂತೆ ಕಾಮಗಾರಿ ಆದೇಶ ಪಡೆದಿರುತ್ತದೆ. ಕೂಲಿ ಕಾರ್ಮಿಕರಿಂದ ಕೆಲಸ ನಿರ್ವಹಿಸಿದ್ದು, ಆ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಕಿರಿಯ ಅಭಿಯಂತರರ ಸಮ್ಮುಖದಲ್ಲಿ ಕೆಲಸದ ಅಳತೆ ಮಾಡಿ ಅಳತೆ ಪುಸ್ತಕದಲ್ಲಿ ನಮೂದು ಮಾಡಿರುತ್ತಾರೆ. ಬುಡೇನ್‌ಸಾಬ್ ಹೊಲದಿಂದ ದೊಡ್ಡೆತ್ತಿನಹಳ್ಳಿ ಕೆರೆವರೆಗೆ ಜಂಗಲ್ ಕಟಿಂಗ್ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ, ಕೋಡಿಕೊಪ್ಪ ರಸ್ತೆಯಿಂದ ತುಂಬುಹಳ್ಳದ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ, ಏಳುಕೋಟ್ಯಪ್ಪನವರ ಮನೆಯಿಂದ ಕಾಲೇಜು ರಸ್ತೆವರೆಗೆ ರಸ್ತೆ ಅಭಿವೃದ್ಧಿ, ಕೆರೆಕೋಡಿ ನಿರ್ಮಾಣ, ಡಿ.ಮುರಿಗೆಪ್ಪನ ಮನೆಯಿಂದ ಸುಬ್ರಮಣ್ಯರವರ ಹೊಲದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಸಮತಟ್ಟು ಕಾಮಗಾರಿಗಳ ಬಗ್ಗೆ ಕಾಮಗಾರಿಯ ಆದೇಶದಂತೆ ಕೂಲಿ ಕಾರ್ಮಿಕರಿಂದ ಕೆಲಸ ನಿರ್ವಹಿಸಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಿರಿಯ ಅಭಿಯಂತರರ ಸಮ್ಮುಖದಲ್ಲಿ ಕೆಲಸದ ಅಳತೆ ಮಾಡಿ ಅಳತೆ ಪುಸ್ತಕದಲ್ಲಿ ನಮೂದು ಮಾಡಿರುತ್ತಾರೆ. ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ.

4) ಸಾಮಾನ್ಯ ಸಭೆಯಲ್ಲಿ ದಿ.16//7/14 ಮತ್ತು ದಿ.26/8/14 ರಂದು ಸುಧೀರ್ಘವಾಗಿ ಚರ್ಚಿಸಿ ಎಲ್ಲಾ ಕಾಮಗಾರಿಗಳಿಗೂ ಬಿಲ್ ಪಾವತಿಸಲು ಸರ್ವ ಸದಸ್ಯರು ಒಪ್ಪಿಗೆ ನೀಡಿರುತ್ತಾರೆ. ಸದರಿ ಕಾಮಗಾರಿಗಳ ಗುಣಮಟ್ಟ, ತಾಂತ್ರಿಕ ವಿಷಯ ಹಾಗೂ ಉದ್ದ ಅಗಲ ಅಳತೆಯನ್ನು ಸಂಬಂಧಿಸಿದ ಜೂನಿಯರ್ ಇಂಜಿನಿಯರ್ ನಿರ್ವಹಿಸಿ ಅಳತೆ ಪುಸ್ತಕದಲ್ಲಿ ನಮೂದು ಮಾಡಿರುತ್ತಾರೆ. ಆದ್ದರಿಂದ, ದೂರಿನಲ್ಲಿ ಯಾವುದೇ ಸತ್ಯಾಂಶವಿಲ್ಲವೆಂದು ಹೇಳಿರುತ್ತಾರೆ.

5) 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ನ್ಯಾಮತಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಸರ್ಕಾರದ ನಿರ್ದೇಶನದಂತೆಯೇ ಆಗಿದ್ದು, ದೂರಿನಂತೆ ಯಾವುದೇ ಹಣ ದುರುಪಯೋಗವಾಗಿಲ್ಲ. ವೈಯಕ್ತಿಕ ವಿಚಾರಗಳ ದ್ವೇಷದ ಹಿನ್ನಲೆಯಲ್ಲಿ ಈ ದೂರು ಸಲ್ಲಿಸಿರುವುದು ಕಂಡುಬರುತ್ತದೆ. ಸದರಿ ಯೋಜನೆಯಲ್ಲಿ ಕಾಮಗಾರಿಗಳು ನಡೆದಿರುವುದನ್ನು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಆ ಪ್ರಕಾರ ಅಳತೆ ಪುಸ್ತಕದಲ್ಲಿ ನಮೂದಿಸಿದ್ದು, ಹಣ ಪಾವತಿಸುವ ವಿಚಾರ ಪಂಚಾಯಿತಿಯ ಅಧಿಕಾರ ವರ್ಗದವರಿಗೆ ಸಂಬಂಧಿಸಿದ್ದಾಗಿರುತ್ತದೆ. ಕಾಮಗಾರಿಗಳು ಮುಗಿದಿದ್ದರೂ ಸಹ ತಾಂತ್ರಿಕ ಕಾರಣಗಳಿಂದ ಹಣ ಪಾವತಿ ಆಗಿರುವುದಿಲ್ಲ. ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಎಲ್ಲಾ ಕಾಮಗಾರಿಗಳನ್ನು ಪರಿಶೀಲಿಸಿದ್ದು, ನಂತರವೇ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತದೆ. ದೂರಿನಲ್ಲಿ ಹೇಳಿರುವಂತೆ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

6) 4 ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಯನ್ನು ಗ್ರಾಮಪಂಚಾಯತಿಯಿಂದ ಎನ್.ಆರ್.ಇ.ಜಿ.ಎ. ನಿಯಮಾವಳಿಗಳ ಪ್ರಕಾರ ಕೂಲಿಕಾರರನ್ನು ಬಳಸಿ ಕಾಮಗಾರಿಗಳನ್ನು ಮಾಡಲಾಗಿದ್ದು, ಆ ಬಗ್ಗೆ ಎನ್.ಎಂ.ಆರ್.ದಾಖಲಾತಿಗಳನ್ನು ನಿರ್ವಹಿಸಿರುತ್ತದೆ ಹಾಗೂ ಸಾಮಾಗ್ರಿಗಳು ಬೇಕಾದ ಸಂದರ್ಭದಲ್ಲಿ ನಿಯಮಾವಳಿಯಂತೆ ನೋಂದಾಯಿತ ಗುತ್ತಿಗೆದಾರರಿಂದ ಸರಬರಾಜು ಪಡೆದು ಕಾಮಗಾರಿ ನಿರ್ವಹಿಸಲಾಗಿರುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾಮಗಾರಿಗಳನ್ನು ನಿರ್ವಹಿಸುವ ಕೆಲವೊಂದು ಸಂದರ್ಭಗಳಲ್ಲಿ ನಿಯಮಾವಳಿಯಂತೆ 60:40 ಅ ಅನುಮಪಾತದಲ್ಲಿ ಯಂತ್ರಗಳನ್ನು ಬಳಸಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಕೂಲಿ ಕಾರ್ಮಿಕರಿಂದಲೇ ಕೆಲಸವನ್ನು ಮಾಡಿಸಲಾಗಿದೆ. ಕೂಲಿಕಾರರು ನಿರ್ವಹಿಸಿದ ಕಾಮಗಾರಿ ಮೊತ್ತವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿರುತ್ತದೆ. ನಿರ್ವಹಿಸಿರುವ ಕಾಮಗಾರಿಗಳು ಕಳಪೆಯಿಂದ ಕೂಡಿರುವುದಿಲ್ಲ. ಶ್ರೀ.ಜಿ.ಟಿ.ರಾಮಕೃಷ್ಣರವರು ಎಂ.ಬಿ.ಪುಸ್ತಕದಲ್ಲಿ ಯಾವ ಕಾರಣಕ್ಕಾಗಿ ಅಡ್ಡಗೆರೆ ಎಳೆದಿರುತ್ತಾರೆನ್ನುವುದು ಅವರ ಗಮನಕ್ಕೆ ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

7) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಕಾಮಗಾರಿಯನ್ನು 3ನೇ ಪಕ್ಷದವರ ಪರಿಶೀಲನೆಯ ಮೂಲಕ ಸಂಪೂರ್ಣ ತನಿಖೆ ಕೈಗೊಂಡಿರುತ್ತಾರೆ. ಪ್ರಸ್ತುತ ಕಾಮಗಾರಿಯ ಬಿಲ್ ತಯಾರಿಸಿದ್ದು, ಆ ಕಾಮಗಾರಿಯ ಗುಣಮಟ್ಟ ಸಂಪೂರ್ಣ ತೃಪ್ತಿಕರವಾಗಿದೆಯೆಂದು ಖುದ್ದು ಮನಗಂಡಿದ್ದು, ದೂರನ್ನು ವಾಪಸ್ ಪಡೆಯುತ್ತಿದ್ದಾರೆಂದು ಹೇಳಿರುತ್ತಾರೆ.

8) ದೂರುದಾರರು ತನ್ನ ಪ್ರತ್ಯುತ್ತರದ ಜೊತೆ ಓಂಬಡ್ಸ್‌ಮನ್ ನ್ಯಾಯಾಲಯದಲ್ಲಿ ದಿ.12/3/15 ರಂದು ಮಾಡಿರುವ ಆದೇಶದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ, ಕಾಮಗಾರಿಗಳ ಅನುಷ್ಠಾನದಲ್ಲಿ ಕಂಡುಬಂದ ವ್ಯತ್ಯಾಸದ ಹಿನ್ನೆಲೆಯಲ್ಲಿ ಒಟ್ಟು ರೂ.17,76,238/-ಗಳ ಪೈಕಿ ರೂ.2.66 ಲಕ್ಷಗಳನ್ನು ಜೆ.ಬಿ.ವಿಜಯಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನ್ಯಾಮತಿ ಗ್ರಾಮಪಂಚಾಯತ್, ರೂ.2.66 ಲಕ್ಷಗಳನ್ನು ನ್ಯಾಮತಿ ಗ್ರಾಮಪಂಚಾಯತ್ ಅಧ್ಯಕ್ಷರು, ರೂ.10.67 ಲಕ್ಷವನ್ನು ಕೆ.ಕೃಷ್ಣಾನಾಯಕ, ಸಹಾಯಕ ಇಂಜಿನಿಯರ್ ಮತ್ತು ರೂ.1.77 ಲಕ್ಷಗಳನ್ನು ಎಂ.ವಿ.ರಾಜಶೇಖರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇವರಿಂದ ವಸೂಲು ಮಾಡಲು ಆದೇಶಿಸಿರುವುದು ಕಂಡುಬಂದ ಮೇರೆಗೆ ಎಂ.ವಿ.ರಾಜಶೇಖರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರನ್ನು 4ನೇ ಎದುರುದಾರರನ್ನಾಗಿ ಪರಿಗಣಿಸಿ ಅವರಿಂದ ಆಕ್ಷೇಪಣೆಯನ್ನು ತರಿಸಲಾಗಿರುತ್ತದೆ.

9) ಓಂಬಡ್ಸ್‌ಮನ್ ನ್ಯಾಯಾಲಯದಲ್ಲಿ ಆದ ಆದೇಶವನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ಧ ಮಾಡಿರುವ ಆಪಾದನೆಗಳು ನಿಜವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಹಣ ದುರುಪಯೋಗದ ಬಗ್ಗೆ ಎದುರುದಾರರು ನೀಡಿರುವ ಆಕ್ಷೇಪಣೆ ಸಮಂಜಸವಾಗಿರುವುದಿಲ್ಲ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹಣ ದುರುಪಯೋಗದ ಬಗ್ಗೆ ಸೂಕ್ತವಾದ ಮತ್ತು

ಸಮಂಜಸವಾದ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಆದ್ದರಿಂದ, ದೂರುದಾರರು ಮಾಡಿರುವ ಆಪಾದನೆಯನ್ನು ಅಲ್ಲಗಳೆಯಲು ಎದುರುದಾರರು ಯಾವುದೇ ಸಾಕ್ಷ್ಯಾಧಾರಗಳನ್ನು ಒದಗಿಸಿರುವುದಿಲ್ಲ. ದೂರುದಾರರ ದೂರು, ಎದುರುದಾರರ ಆಕ್ಷೇಪಣೆ ಹಾಗೂ ಓಂಬಡ್ಸ್‌ಮೆನ್‌ರವರ ವರದಿಯನ್ನು ಪರಿಶೀಲಿಸಿದಾಗ, 1 ರಿಂದ 4ನೇ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಹಾಗೂ ಅಧಿಕಾರ ಮತ್ತು ಹಣ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ 1 ರಿಂದ 4ನೇ ಎದುರುದಾರರು ದುರುಪಯೋಗಪಡಿಸಿಕೊಂಡಿರುವ ಹಣವನ್ನು ವಸೂಲಿ ಮಾಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 21-1-17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.